## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:405/2021

**ಸಾಕ್ಷಿಯನ್ನು ದಿಃ 20.03.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಯೋಗೇಶ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ಚನ್ನಶೆಟ್ಟಿ | | |
| ವಯಸ್ಸು | 25 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಬಸವನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಮೃತ ಸಂತೋಷ ಕುಮಾರ ನನ್ನ ಸ್ನೇಹಿತ. ಅವರು ಒಂದು ರಸ್ತೆ ಅಪಘಾತದಲ್ಲಿ ತೀರಿಕೊಂಡರು. ಸುಮಾರು 5-6 ವರ್ಷದ ಹಿಂದೆ ಬಸವನಹಳ್ಳಿಯಲ್ಲಿ ಅಪಘಾತವಾಗಿತ್ತು. ನಾನು ಮತ್ತು ನನ್ನ ಗೆಳೆಯರೆಲ್ಲ ಮದುವೆಗೆ ಬಂದಿದ್ದೆವು. ಮೃತ ಸಂತೋಷಕುಮಾರ ಬೈಕ್ ನಲ್ಲಿ ಮದುವೆ ಮುಗಿಸಿಕೊಂಡು ಗದ್ದಿಗೆಯಿಂದ ಬಸವನಹಳ್ಳಿಗೆ ಹೋಗುತ್ತಿದ್ದರು. ನಮ್ಮ ಊರಿನ ಸೇತುವೆ ಹತ್ತಿರ ನಾನು ಹೋಗುತ್ತಿದ್ದಾಗ ಜನರೆಲ್ಲ ಸೇರಿದ್ದರು. ನಾನು ಹೋಗಿ ನೋಡಿದಾಗ ಸಂತೋಷ ಕುಮಾರ ಗೆ ಏಟಾಗಿತ್ತು. ಅಪಘಾತ ಹೇಗೆ ಯಾರ ತಪ್ಪಿನಿಂದಾಯಿತು ಎಂದು ಗೊತ್ತಿಲ್ಲ. ನನ್ನ ಗೆಳೆಯನಾಗಿದ್ದ ಕಾರಣ ಮರು ದಿನ ದೂರನ್ನು ನೀಡಿದ್ದೇನೆ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ನಕ್ಷೆ ತಯಾರಿಸಿಲ್ಲ ಸಾಕ್ಷಿ ಮಹಜರು ಮತ್ತು ನಕ್ಷೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಸಾಕ್ಷಿಯ ಸಹಿಗಳನ್ನು ನಿಪಿ3(ಎ) ಮತ್ತು ನಿಪಿ 4(ಎ)

ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ. ಸದರಿ ಸಹಿಗಳನ್ನು 5–6 ವರ್ಷಗಳ ಹಿಂದೆ ಹಾಕಿದ್ದೇನೆ. ಎಲ್ಲಿ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಮಾಡಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ನಿಪಿ 3 ಮತ್ತು 4 ಕ್ಕೆ ಸಹಿ ಹಾಕಿದಾಗ ನನ್ನ ಜೊತೆ ಬೇರೆ ಯಾರು ಇರಲಿಲ್ಲ.ಸಮಯ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ದಿನಾಂಕ 01.02.2020 ರಂದು ನಮ್ಮ ಊರಿನ ಶೇಖರೇಗೌಡರ ಮಗಳ ಮದುವೆಯ ಚಪ್ಪರದ ಕಾರ್ಯಕ್ಕೆ ರಾತ್ರಿ ಸುಮಾರು 7.30 ಗಂಟೆಯಲ್ಲ್ ನಾನು ಮತ್ತು ಮೃತ ಸಂತೋಷಕುಮಾರ ಕೆಎ–09–ಹೆಚ್ ಕ್ಯೂ–4655 ರ ಸಂತೋಷ ಕುಮಾರನ ಬೈಕ್ ನಲ್ಲಿ ಅಲ್ಲಿಗೆ ಹೋಗಿ ಊಟ ಮುಗಿಸಿ ವಾಪಸುಸ ಅದೇ ಬೈಕ್ ನಲ್ಲಿ ರಾತ್ರಿ ಸುಮಾರು 9.45 ಗಂಟೆಗೆ ನಮ್ಮ ಊರಿನ ಸಮೀಪದ ಕಾಲುವೆ ಹತ್ತಿರ ಬರುತ್ತಿದ್ದಾಗ ಮಾದಪುರದ ಕಡೆಯಿಂದ ಗದ್ದಿಗೆ ಕಡೆಗೆ ಒಂದು ಬೈಕ್ ನ್ನು ಅದರ ಸವಾರ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕ್ ಗೆ ಡಿಕ್ಕಿ ಮಾಡಿ ಅಪಘಾತಪಡಿಸಿದ ಎಂದರೆ ಸರಿಯಲ್ಲ. ನಾನು ಮತುತ ಸಂತೋಷಕುಮಾರ ಬೈಕ್ ಸಮೇತ ಕೆಳಗೆ ಬಿದ್ದೆವು ಎಂದರೆ ಸರಿಯಲ್ಲ. ನನ್ನ ಎಡ ಮೊಣಕಾಲಿಗೆ ಏಟಾಯಿತು ಎಂದರೆ ಸರಿಯಲ್ಲ. ಸಂತೋಷಕುಮಾರ ನ ತಲೆ, ಮುಖಕ್ಕೆ ಏಟಾಗಿತ್ತು ಎಂದರೆ ಸರಿಯಲ್ಲ. ಬೈಕ್ ನ ಹಿಂಭಾಗದಲ್ಲಿ ಬರುತ್ತಿದ್ದ ಯೋಗರಾಜ ಹಾಗೂ ನಾಗಣ್ಣರವರು ನಮ್ಮನ್ನು ಉಪಚರಿಸಿದರು ಎಂದರೆ ಸರಿಯಲ್ಲ. ಡಿಕ್ಕಿ ಮಾಡಿದ ಬೈಕ್ ಸಂಖ್ಯೆ ನೋಡಿದಾಗ ಕೆಎ–45–ಎಲ್–5215 ಆಗಿತ್ತು ಎಂದರೆ ಸರಿಯಲ್ಲ. ಬೈಕ್ ಸವಾರನ ಹೆಸರು ರವಿ ಎಂದು ಗೊತ್ತಾಯಿತು ಎಂದರೆ

ಸರಿಯಲ್ಲ. ಆತನಿಗೂ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಸಂತೋಷಕುಮಾರನನ್ನು ಕಾರಿನಲ್ಲಿ ಮೈಸೂರು ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿ ರಾತ್ರಿ 11.20 ಕ್ಕೆ ಆತ ಮೃತಪಟ್ಟ ಎಂದರೆ ಗೊತ್ತಿಲ್ಲ. ನನಗೆ ಜಾಸ್ತಿ ಪೆಟ್ಟಾಗದ ಕಾರಣ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತವೂ ಕೆಎ-45-ಎಲ್-5215 ರ ಬೈಕ್ ಸವಾರನ ತಪ್ಪಿನಿಂದಾಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿ 1ರ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02.02.2020 ರಂದು ಪೊಲೀಸರು ಅಪಘಾತದ ಸ್ಥಳಕ್ಕೆ ಬಂದಾಗ ನಾನು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಚಾಸಾ 10 ಮತ್ತು 11 ರವರ ಸಮಕ್ಷಮ ಸಂಜೆ 4 ರಿಂದ 5 ಗಂಟೆಯವರೆಗೆ ನಿಪಿ 3 ರ ಮಹಜರು ಮಾಡಿ ಕೆಎ-09-ಹೆಚ್ ಕ್ಯೂ-4655 ಮತ್ತು ಕೆಎ-45-ಎಲ್-5215 ರ ಬೈಕ್ ಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ 4 ರ ನಕ್ಷೆಯನ್ನು ತಯಾರಿಸಿದರು ಎಂದರೆ ಸರಿಯಲ್ಲ. ಈಗ ಮೃತನ ಕುಟುಂಬದವರು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದಾರೆಂದರೆ ಸರಿ. ಆ ಕಾರಣದಿಂದ ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಕೂಡ ಅರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಇ ಎಂ ವಕೀಲರಿಂದಃ**

ಇಲ್ಲ

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.